


ಓರಗಿತ್ತಿಯರಿಗೆ ಹೀಗೇ ಬೇಸರ ಆದಾಗಲೆಲ್ಲಾ ಚಹಾ ಹಬೆಯಾಡುತ್ತಿತ್ತು. ಚಹಾದ ರುಚಿಯೋ, ಹಬೆಯೋ, ಬಿಸಿಯೋ... ಅಥವಾ ಎಲ್ಲದರ ಸಂಗಮವೋ ಅವರ ಬೇಸರವನ್ನು ಪರಿಹರಿಸುವುದರ ಜೊತೆಗೆ ಮನಸ್ಸನ್ನು ಹಗುರಗೊಳಿಸುವ ಗುರುತರವಾದ ಕೆಲಸವನ್ನು ಅದು ಅಚ್ಚುಕಟ್ಟಾಗಿ ಮಾಡುತ್ತಿತ್ತು. ಹಾಗಾಗಿಯೇ ಆ ನಿರ್ಜೀವ ಚಹಾ ಅವರ ನಡುವೆ ಜೀವಂತವಾಗುತ್ತಿತ್ತು.

‘ಯಾಕ್ ಹಿಂಗೆ ಕುದಿಯೋ ಸಾರಿನ್ ಹಾಂಗ ಆಡ್ತಿ... ಈ ಸಾರಿ ನಾನೂ ಹೇಳ್ತೀನಿ ಭಾವುಂಗೆ... ಆಸ್ಪತ್ರಿಗ್ ಹೋಗ್ಬರಾಂತ್ರಿ ತಗಾಳೆ... ಚಿಂತಿ ಯಾಕ್ ಮಾಡ್ತಿ...’

‘ರಾಜಕ್ಕ ಚಿಂತಿ ಮಾಡ್ದ ಹೆಂಗ್ ಇರ್ಲಿ ಹೇಳ... ಅವ್ರುನ್ ನೋಡಿಲ್ಲೇನು... ಇತ್ತಿತ್ಲಾಗ ಸೋರಗಕ್ತತ್ತಿದ್ದಲ್ದ ನನ್ ಹಂತ್ರ ಮಾತಾಡೂದೂ ಕಡಿಮಿ ಮಾಡ್ಯಾರಾ. ನಾ ಏನ್ ಮಾಡೇನಿ ಹೇಳು. ಆಸ್ಪತ್ರಿಗ್ ಹೋಗೋಣಂತ ಹೇಳೋದೂ ತಪ್ಪಾ... ಮತ್ತ... ಮತ್ತ...’

‘ಹೇಳೇ ಮತ್ತೇನು?’

‘ಮತ್ತ ಅವ್ರು ರಾತ್ರಿ ನಂಜೊತಿ ಮಲ್ಗೋದ ಬಿಟ್ಟಾರ... ಕೇಳಿದ್ರೆ ಏನೋ ಒಂದ್ ಸಬೂಬು ಹೇಳ್ತಾರ’ ಅಂತನ್ನುವ ಹೊತ್ತಿಗೆ ಅವಳ ಕಣ್ಣುಗಳು ತುಂಬಿಕೊಂಡವು. ಕೊಂಚ ತಣ್ಣಗಾಗಿದ್ದ ಮಳೆಯೂ ಧೋ ಎಂದು ಶಬ್ದ ಮಾಡುತ್ತಾ ಸುರಿಯತೊಡಗಿತು. ಸಮಯ ಸರಿಯುತ್ತಿದ್ದರೂ ಮಳೆ ಸುರಿಯುವುದು ಮಾತ್ರ ನಿಲ್ಲಲಿಲ್ಲ. ಪ್ರತಿಮಾ ಚಿಂತೆ ಮಾಡಹತ್ತಿದಳು. ಗಂಡ ಬೆಳ್ಳಂ ಬೆಳಗ್ಗೆಯೇ ಮನೆ ತೊರೆದವನು ಮಧ್ಯಾಹ್ನವಾದರೂ ಇನ್ನೂ ಬಂದಿರಲಿಲ್ಲ. ತಿಂಡಿಯೂ ತಿಂದಿಲ್ಲ. ಹೊರಗಡೆಯೇ ಮುಗಿಸಿಕೊಂಡನಾ? ಕಾಲ್ ಮಾಡಿದರೆ ಸ್ವಿಚ್ ಆಫ್ ಬರ್ತಿದೆ. ಗಂಡ ಹಿಂದೆ ಹೀಗಿರಲಿಲ್ಲ. ಇದೆಲ್ಲ ಏನಾಗುತ್ತಿದೆ ಯಾಕಾಗುತ್ತಿದೆ ಒಂದೂ ತಿಳಿಯದೆ ತೊಳಲಾಡುತ್ತಿರುವಾಗ ಮಗನ ಕೂಗು ಕೇಳಿಸಿತು.

‘ಅಮ್ಮಾ ಊಟ...’ ಕೂಗುತ್ತಲೇ ಅಡುಗೆ ಮನೆಗೆ